**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 34/2021** ಸಿ.ಡಬ್ಲ್ಯೂ -9

ಪಿ.ಡಬ್ಲ್ಯೂ -5

ಹೆಸರು : ಇಂದುಮತಿ

ತಂದೆ:ಗಂಡ : ಸಂತೋಷಕುಮಾರ

ವಯಸ್ಸು : 29 ವರ್ಷ

ಉದ್ಯೋಗ : ಪಿಎಸಐ, ನಾರಾಯಣಪೂರ

ವಾಸಸ್ಥಳ : ನಾರಾಯಣಪೂರ

ದಿನಾಂಕ:07.02.2024

ಸತ್ಯ ಪ್ರತಿಜ್ಞೆಯ ಮೇರೆಗೆ.

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು 04.03.2020 ರಿಂದ 23.05.2023 ರ ವರೆಗೆ ಮಾದನ ಹಿಪ್ಪರಗಾ ಪೋಲಿಸ ಠಾಣೆಯಲ್ಲಿ ಪಿಎಸಐ ಎಂದು ಕಾರ್ಯ ನಿರ್ವಹಿಸಿದ್ದೇನೆ.

ದಿ.21.05.2021 ರಂದು ಠಾಣೆಯಲ್ಲಿದ್ದಾಗಾ ರಾತ್ರಿ 09.45 ಗಂಟೆಗೆ ಚಾಸಾ-1 ರವರು ಅಶ್ರಾರ ಕಾರ್ಯಕರ್ತೆ ಠಾಣೆಗೆ ಬಂದ ನೀಡಿದ ಅರ್ಜಯ ಸಾರಾಂಶದ ಮೇರೆಗೆ ಗುನ್ನೆ ಸಂಖ್ಯೆ 19/2020 ಪ್ರಕರಣ ದಾಖಲಿಸಿ ದಿ.21.05.2020 ರಾತ್ರಿ 10.45 ಗಂಟೆಗೆ ನ್ಯಾಯಾಲಯದ ಪೇದೆ ಮುಖಾಂತರ ಮಾನ್ಯ ನ್ಯಾಯಾಧೀಶರಿಗೆ ಪ್ರ.ವ.ವ.ವನ್ನು ಕಳುಹಿಸಿ ಮುಂದಿನತನಿಖೆ ಕೈಗೊಂಡಿರುತ್ತೇನೆ. ದಿ.22.05.2021 ರಂದು ಚಾಸಾ-1 ರವರು ಪಂಚನಾಮೆ ಜಾಗ ತೋರಿಸಿದ್ದು ಬೆಳಗ್ಗೆ 9.00 ರಿಂದ 10.00 ರ ವರೆಗೆ ಗುನ್ನೆ ಪಂಚನೆಮ ಚಾಸಾ-2, 3 ರವರ ಸಮಕ್ಷಮ ಮಾಡಿ ಒಂದು ಹಿಡಿಗಾತ್ರದ ಕಲ್ಲು ಜಪ್ತಿಪಡಿಸಿಕೊಂಡಿರುತ್ತೇನೆ. ಸಾಕ್ಷಿ ಮು.ಮಾ. ನೋಡಿ ಗುರುತಿಸುತ್ತಾರೆ. ದಿ.22.05.2020 ರಂದು ಚಾಸಾ-4, 5, 6 ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿ. 20.08.2020 ರಂದು ಚಾಸಾ-8 ರವರಿಂದ ದೃಡಿಕರಣ ಪತ್ರವನ್ನು ಪಡೆದಿರುತ್ತೇನೆ. ದಿ.23.09.2020 ರಂದು 5 ಆರೋಪಿತರು ಮಾನ್ಯ ಸತ್ರ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಹಾಜರಾಗಿದ್ದು, ದಿ.17.10.2020 ರಂದು ಚಾಸಾ-7 ರವರಿಂದ ಚಾಸಾ-1 ರವರ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಅದೇ ದಿನ ದೊ.ಪ. ಸಂಖ್ಯೆ 35/2020 ನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಈಗ ಪ್ರ.ವ.ವ.ವನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಪ್ರ.ವ.ವ.ವನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಪಿ-1 ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಪಿ-3 ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಪಿ-4 ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಚಾಸಾ-1 ರವರ ಧೃಡಿಕರಣ ಪತ್ರ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಅದನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾ. ಸವಾಲು:- ಆರೋಪಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ:**

ಚಾಸಾ-1 ರವರು ದೂರು ನೀಡಿದಾಗ ಲಾಕಡೌನ ಇತ್ತು ಎಂದರೆ ಸರಿ. ಅದೇ ಪ್ರಕಾರ ಮಾನ್ಯ

ಜಿಲ್ಲಾಧಿಕಾರಿಗಳಿಂದ ನಮಗೆ ಆದೇಶ ಇತ್ತು ಎಂದರೆ ಸರಿ. ಪ್ರತಿ ಹಳ್ಳಿಗಳಲ್ಲೂ ಕ್ವಾರಂಟೈನ ಸೆಂಟರಗಳ ಪಟ್ಟಿಯನ್ನು ನಮಗೆ ಸಲ್ಲಿಸಿದ್ದರು ಎಂದರೆ ಸರಿ. ನಾನು ಕಿಣ್ಣಿ ಅಬ್ಬಾಸ ಗ್ರಾಮದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಕ್ವಾರಂಟೈನ ಸೆಂಟರ ಇರುವ ಬಗ್ಗೆ ದೊ.ಪ.ಯೊಂದಿಗೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಕ್ವಾರಂಟೈನ ಸೆಂಟರನಲಿ ಎಷ್ಟು ಜನ ಇದ್ದರು ಎಂಬ ಬಗ್ಗೆ ನಾನು ದೊ.ಪ.ಯೊಂದಿಗೆ ದಾಖಲೆ ಸಲ್ಲಿಸಿರುವುದಿಲ್ಲ. ಚಾಸಾ-4 ರವರು ಹಾಗೂ 1ನೇ ಆರೋಪಿ ಕ್ವಾರಂಟೈನ ಇದ್ದ ಬಗ್ಗೆ ನಾನು ದೊ.ಪ.ಯೊಂದಿಗೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಕ್ವಾರಂಟೈನ ಸೆಂಟರನಲ್ಲಿ ಸರ್ಕಾರದವರು ಒಂದು ರಜಿಸ್ಟರನಲ್ಲಿ ಎಷ್ಟು ಜನ ಕ್ವಾರಂಟೈನ ಇದ್ದರು ಎಂದು ಸದರಿ ರಜಿಸ್ಟರನಲ್ಲಿ ಬರೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಕ್ವಾರಂಟೈನ ಸೆಂಟರನಲ್ಲಿ ಎಷ್ಟು ಜನ ಇದ್ದರು ಎಂದು ನಾನು ದಾಖಲೆ ಸಲ್ಲಿಸಿರುವುದಿಲ್ಲ. ಚಾಸಾ-1 ರವರು ಆಸ್ಪತ್ರೆಯಲ್ಲಿ ದಾಖಲು ಇದ್ದ ಕಾರಣ ನಮಗೆ ಯಾವುದೇ ಎಂಎಲಸಿ ಬಂದಿರುವುದಿಲ್ಲ. ದೂರುದಾರರೊಂದಿಗೆ ಅವರ ಗಂಡ ಠಾಣೆಗೆ ದೂರು ನೀಡುವಾಗ ಬಂದಿದ್ದರು. ಚಾಸಾ-1 ರವರ ಗಂಡನ ಹೆಸರು ಗೊತ್ತಿರುವುದಿಲ್ಲ. ಕ್ವಾರಂಟೈನ ಸೆಂಟರನಲ್ಲಿ ಕೋವಿಡ ಪಾಸಿಟಿವ ಬಂದವರನ್ನು ಕ್ವಾರಂಟೈನ ಮಾಡುತ್ತಿದ್ದರು ಹಾಗೂ ಕೇವಿಡ ನೆಗೆಟಿವ ಇದ್ದವರನ್ನು ಬಿಡುಗಡೆ ಮಾಡಲಾಗುತ್ತಿತ್ತು ಎಂದರೆ ಸರಿ ಸಾಕ್ಷಿ ಮುಂದುವರೆದು ಮುಂಬಯಿಯಿಂದ ಬಂದವರಿಗೆ ಕನಿಷ್ಟ 15 ದಿನಗಳ ಕಾಲ ಕ್ವಾರಂಟೈನ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆರೋಪಿ ಯಾವಾಗ ಕ್ವಾರಂಟೈನ ಸೆಂಟರಗೆ ದಾಖಲಾಗಿದ್ದನು ಯಾವಾಗ ಬಿಡುಗಡೆ ಆದನು ಎಂದು ದೂರಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ಚಾಸಾ-2, 3 ರವರನ್ನುನಾವೇ ಬರಮಾಡಿಕೊಂಡಿರುತ್ತೇವೆ. ಚಾಸಾ-3 ರವರು ತಮ್ಮ ಸಾಕ್ಷಿಯಲ್ಲಿ ಅವರಿಗೆ ಪಂಚನಾಮೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಅವರು ಪಂಚನಾಮೆಗೆ ಬಂದಿರುತ್ತಾರೆ ನಾವು ಭಾವಚಿತ್ರವನ್ನು ತೆಗೆದಿರುತ್ತೇವೆ ಎಂದು ಹೇಳುತ್ತಾರೆ. ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ಗುನ್ನೆ ಸ್ಥಳದಲ್ಲಿ ಪಡೆದಿರುತ್ತೇನೆ. ನಾನು ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಸುಳ್ಳು ಪಂಚನಾಮೆ ಮಾಡಿ ಸುಳು ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಧೃಡಿಕರಣ ಪತ್ರ ತೆಗೆದುಕೊಳ್ಳುವಾಗ ಅವರ ನೇಮಕಾತಿ ಆದೇಶವನ್ನು ಪಡೆದಿರುವುದಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಒಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ತನಿಖೆ ಕೈಗೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ನಾನು ಯಾವುದೇ ಮು.ಮಾ. ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ.ಸಿ ಆಳಂದ